**ಸಿ.ಸಿ. ನಂಬ್ರ: 3002/2019** **PW-1**

ದಿನಾಂಕ: 11.08.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಕೆ ಯು ಎಸ್ ರವರಿಂದ:</u>**

ಚಾಸಾ-2 ನನ್ನ ತಾಯಿ, ಚಾಸಾ-3 ನನ್ನ ಗಂಡ. 2ನೇ ಆರೋಪಿ ನನ್ನ ತಂಗಿ. 2ನೇ ಆರೋಪಿ ಆಕೆಯ ಗಂಡ. ಬೇಳೂರು ಗ್ರಾಮದಲ್ಲಿ ನಮಗೆ ಸಾಕಷ್ಟು ಭೂಮಿಗಳು ಇವೆ ಎಂದರೆ ಸರಿ. ಅದು ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ಅದು ನನ್ನ ಅಜ್ಜಿಯ ಗಂಡ ಕ್ರಯ ಮಾಡಿರುವ ಆಸ್ತಿಯಾಗಿರುತ್ತದೆ. ಆರೋಪಿತರು ಉದ್ಯೋಗ ನಿಮಿತ್ತ ಬೆಂಗಳೂರಿನಲ್ಲಿ ವಾಸವಿದ್ದಾರೆ ಎಂದರೆ ಸರಿ. ನಮ್ಮ ತಂದೆ ಅಣ್ಣಪ್ಪ ಶೆಟ್ಟಿರವರು 8 ವರ್ಷಗಳ ಹಿಂದೆ ಮೃತಪಟ್ಟಿದ್ದು ಅವರು ಮುಂಬೈಯಲ್ಲಿ ಶಿಪ್ ನಲ್ಲಿ ಕೆಲಸ ಮಾಡುತ್ತಿದ್ದರು.

ಈಗ ಮನೆಯಲ್ಲಿ ನಾನು ಚಾಸಾ-2 ಮತ್ತು 3 ರವರು ವಾಸವಾಗಿದ್ದೇವು. ನನ್ನ ತಾಯಿಗೆ 2 ಗಂಡು, 2 ಹೆಣ್ಣು ಮಕ್ಕಳು. ಪ್ರವೀಣ್ ಎಂಬುವರು ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿದ್ದು, ಪ್ರಸನ್ನ ಶೆಟ್ಟಿರವರು ವಿದೇಶದಲ್ಲಿ ಇದ್ದಾರೆ. ಸಿಸಿ ನಂಬ್ರ 1864/2019 ರ ಪ್ರಕರಣ ಆಗುವ ವೇಳೆಗೆ ಪ್ರಸನ್ನ ಶೆಟ್ಟಿರವರು ಊರಿನಲ್ಲಿ ಇದ್ದರು ಎಂದರೆ ಸರಿಯಲ್ಲ. ಸದ್ರಿ ಪ್ರಕರಣವಾಗುವ ವೇಳೆಯಲ್ಲಿ ಆತ 1ನೇ ಆರೋಪಿ ನಾನು 2ನೇ ಆರೋಪಿ, 3ನೇ ಆರೋಪಿ ಜನಾರ್ಧನ ಖಾರ್ವಿ, 4ನೇ ಆರೋಪಿಯು ಈ ಪ್ರಕರಣದ ಚಾಸಾ-3, ಮಮತಾ ಶೆಟ್ಟಿ ರವರು ಆಗಿರುತ್ತಾರೆ ಎಂದರೆ ಸರಿ. ಪ್ರಸನ್ನ ಶೆಟ್ಟಿರವರು 20 ಸೆಂಟ್ಸ್ ಜಾಗವನ್ನು ಚಾಸಾ-2 ರವರ ಹೆಸರಿನಿಂದ ತನ್ನ ಹೆಸರಿಗೆ ದಾಖಲಾತಿ ಮಾಡಿಸಿಕೊಂಡಿದ್ದರು ಎಂದರೆ ಸರಿ. ಆ ಸಂಬಂಧವಾಗಿ ಆತ ಆ ಸಮಯದಲ್ಲಿ ಊರಿನಲ್ಲಿ ಇದ್ದರು ಎಂದರೆ ಸರಿಯಲ್ಲ. ನಮ್ಮ ಕುಟುಂಬದ ತೆಂಗಿನ ತೋಟ, ಅಡಿಕೆ ತೋಟ ಮತ್ತು ಮನೆ ಇರುತ್ತದೆ ಎಂದರೆ ಸರಿ.

2ನೇ ಆರೋಪಿ ಊರಿಗೆ ಬಂದಾಗ ನಮ್ಮ ಮನೆಗೆ ಭೇಟಿ ನೀಡುತ್ತಿದ್ದರು. ಊರಿನಲ್ಲಿರುವ ಆಸ್ತಿಯನ್ನು ನಮ್ಮ ತಂದೆ ಮೃತ ಪಟ್ಟ ನಂತರ ನಾವೇ ನೋಡಿಕೊಳ್ಳುತ್ತಿದ್ದೇವು. ಅದರ ಆದಾಯ ಪತ್ರಗಳನ್ನು ನಾವೇ ವ್ಯವಹರಿಸುತ್ತೇವೆ. 2018ರಲ್ಲಿ 1ನೇ ಆರೋಪಿ ಬೆಂಗಳೂರಿನಲ್ಲಿ ವ್ಯವಹಾರವನ್ನು ಮುಕ್ತಾಯಗೊಳಿಸಿ ಊರಿಗೆ ಸ್ಥಳಾಂತರಗೊಂಡಿರುತ್ತಾರೆ ಎಂದರೆ ಸರಿ. ಅನಂತರದಲ್ಲಿ 2ನೇ ಆರೋಪಿ

ನಮ್ಮ ಮನೆಗೆ ಬಂದಿರುತ್ತಾರೆ ಎಂದರೆ ಸರಿ. ಅದಕ್ಕಾಗಿ ನಾವು ಆಕ್ಷೇಪ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಆಸ್ತಿಯ ವಿಚಾರದಲ್ಲಿ ತಾಯಿಯೊಂದಿಗೆ ತಕರಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ತಮ್ಮನಿಗೆ ನೀಡಿದ ರೀತಿಯಿಲ್ಲ ತನಗೂ ಆಸ್ತಿಯನ್ನು ನೀಡಬೇಕು ಎಂದು ಕೇಳಿರುತ್ತಾರೆ ಎಂದರೆ ಸರಿ.

ಆಕೆಗೆ ಆಸ್ತಿಯನ್ನು ನೀಡುವುದಿಲ್ಲ ಎಂದು ಚಾಸಾ-2ರವರೊಂದಿಗೆ ನಾವು ಬೆಂಬಲಿಸಿರುತ್ತೇವೆ ಎಂದರೆ ಸಾಕ್ಷಿಯು ಎಲ್ಲಾ ನಿರ್ಣಯವನ್ನು ಚಾಸಾ-2 ರವರೇ ತೆಗೆದುಕೊಳ್ಳುವುದಾಗಿ ನುಡಿಯುತ್ತಾರೆ. ಇದರಿಂದಾಗಿ 2ನೇ ಆರೋಪಿಯು ಓ ಎಸ್ ನಂಬ್ರ 33/2019ರಂತೆ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿ. ನಾನು , ಚಾಸಾ-3 ಮತ್ತು ಎಲ್ಲರೂ ಸೇರಿ ಆರೋಪಿತರ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 23-12-2018 ರಂದು ಹಲ್ಲೆ ಮಾಡಿರುವುದಾಗಿ ಸದ್ರಿ ಪ್ರಕರಣ ದಾಖಲಾಗಿದೆ ಎಂದರೆ ಸರಿ.

ದಿಃ 26-12-2018 ರಂದು ನಾವು ದೂರನ್ನು ಕೋಟಾ ಠಾಣೆಯಲ್ಲಿ ನೀಡಿರುತ್ತೇವೆ ಎಂದರೆ ಸರಿ. ನನ್ನ ಪ್ರಕಾರ ಸದ್ರಿ ಘಟನೆ ದಿಃ 26-12-2018ರಂದು ಜರುಗಿರುತ್ತದೆ. ದೂರನ್ನು ದಿಃ 27-12-2018ರಂದು ಸಂಜೆ ದಾಖಲಿಸಿರುತ್ತಾರೆ. ಮೇಲೆ ಹೇಳಿದ ರೀತಿಯ ಯಾವುದೇ ಘಟನೆ ಸಂಭವಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಸ್ಥಳ ಪಂಚನಾಮೆಗೆ ದಿಃ 28-12-2018 ರಂದು ಬೆಳಗ್ಗೆ 10 ರಿಂದ 11 ಗಂಟೆಯವರೆಗೆ ಬಂದಿರುತ್ತಾರೆ. ಆಗ ಚಾಸಾ-4 ಮತ್ತು 5 ರವರು ಇದ್ದರು. ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದ್ರಿ ದಾಖಲೆಯಲ್ಲಿ ಏನೆಲ್ಲಾ ಬರೆದಿದೆ ಎಂದು ಹೇಳಲಾಗುವುದಿಲ್ಲ. ನಿಪಿ-2 ದಾಖಲೆಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮರುಹೇಳಿಕೆಯನ್ನು ನೀಡಿಲ್ಲ. ಆಸ್ತಿ ವಿಚಾರದ ತಕರಾರಿನಿಂದ ಯಾವುದೇ ಘಟನೆ ಸಂಭವಿಸದೆ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ಯಾರು ಎಷ್ಟು ಪೆಟ್ಟು ಹೊಡೆದಿದ್ದಾರೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನಿಪಿ-3 ರ ಹೇಳಿಕೆಯನ್ನು ಪೊಲೀಸರು ಸೂಚಿಸಿದಂತೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ರವರು ನನ್ನ ತಾಯಿಯ ಆಸ್ತಿಯನ್ನು ಲಪಾಟಿಸುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ವರ್ಷ ಇಡೀ ಇರುವ ಆದಾಯದಲ್ಲಿ ಆರೋಪಿತರಿಗೆ ಇರುವ ಆದಾಯ ತಪ್ಪಿಸಲು

ಅವರ ವಿರುದ್ದ ಈ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1ನ್ನು ಪೊಲೀಸರು ಸೂಚಿಸಿದಂತೆ ಬರೆದಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ